ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-2 Issue 1, Jul-Aug 2020, 139-143**
**©*IIMRD*, Mysuru**
IIMRD JOURNALS
**www.iimrd.com**

# ನಿರ್ಲಕ್ಷಿತ ಉಪ್ಪಾರ ಸಮುದಾಯ – ಒಂದು ಅವಲೋಕನ

**ಸಂತೋಷ ನಡಿಹಾಳ**[1]

**ಪೀಠಿಕೆ**

'ಉಪ್ಪಾರ' ಎಂಬ ಹೆಸರಿನಿಂದ ಗುರುತಿಸುವ ಸಮುದಾಯಗಳನ್ನು ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತದ ಕೆಲ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರ ಪ್ರದೇಶ, ತೆಲಂಗಾಣ ಮುಂತಾದ ರಾಜ್ಯಗಳಲ್ಲಿಯೂ ಕಾಣಬಹುದಾಗಿದೆ. ಈ ಸಮುದಾಯದ ಜನರು ಕರ್ನಾಟಕದಲ್ಲಿ ಸುಮಾರು ನಲವತ್ತು ಲಕ್ಷದಷ್ಟಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಬಹುಸಂಖ್ಯಾತರಾಗಿದ್ದರೆ, ಇನ್ನು ಕೆಲವು ಜಿಲ್ಲೆಗಳಲ್ಲಿ ಇವರ ಸಂಖ್ಯೆ ತುಂಬಾ ವಿರಳವಾಗಿ ಕಂಡುಬರುತ್ತದೆ. ಉಪ್ಪಾರರಲ್ಲಿ ಮೇಲು ಸಕ್ಕರೆಯವರು, ಸಗರ ವಂಶಸ್ಥರು. ಕೆರೆ ಬಂದಿಯವರೆಂದು ಬೇರೆ ಬೇರೆ ಹೆಸರುಗಳಿಂದ ಇವರನ್ನು ಗುರುತ್ತಿಸುತ್ತಾರೆ. ಉಪ್ಪಾರರು ಇಂದು ತಮ್ಮ ಜೀವನೋಪಾಯಕ್ಕಾಗಿ ವಿವಿಧ ಕ್ಷೇತ್ರಗಳನ್ನು ಅವಲಂಭಿಸಿದ್ದಾರೆ. ಕೃಷಿಯನ್ನು ಅವಲಂಬಿಸಿ ಭೂಮಿಯ ಒಡೆಯರಾಗಿದ್ದಾರೆ. ಕರ್ನಾಟಕ ಸರಕಾರದ ಉನ್ನತವಲಯಗಳಲ್ಲಿ, ವಾಣಿಜ್ಯೋದ್ಯಮಗಳಲ್ಲಿ, ಸಿನಿಮಾ ಕ್ಷೇತ್ರದಲ್ಲಿ, ಹಲವು ವ್ಯವಹಾರಗಳಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಉಪ್ಪಿನ ತಯಾರಿಕೆಯನ್ನು ಕುಲಕಸುಬನ್ನಾಗಿಸಿಕೊಂಡಿದ್ದು, ಉಪ್ಪಾರರನ್ನು 'ಉಪ್ಪರ', 'ಉಪ್ಪಾರ' ಮತ್ತು 'ಉಪ್ಪಲಿಗ'ಎಂದು ಕರೆಯಲಾಗುತ್ತದೆ. ತಮಿಳುನಾಡಿನ ಉಪ್ಪಲಿಯನ್ನರು ತಮಿಳನ್ನು, ತೆಲುಗು ಪ್ರಾಂತ್ಯದ ಉಪ್ಪಾರರು ತೆಲುಗನ್ನು, ಕರ್ನಾಟಕದ ಉಪ್ಪಾರರು ಕನ್ನಡವನ್ನು ಮಾತನಾಡುತ್ತಾರೆ. ಉಪ್ಪಾರರು ಕೆರೆಗಳನ್ನು ತೋಡುತ್ತಿದ್ದು ಮತ್ತು ಮಣ್ಣಿನ ಕೆಲಸವನ್ನು ಮಾಡುತ್ತಿದ್ದ ಒಂದು ಸಮುದಾಯ. ಹೆಸರೇ ಸೂಚಿಸುವಂತೆ ಅವರ ಪರಂಪರಾಗತ ಕಸುಬು ಉಪ್ಪನ್ನು ತಯಾರಿಸುವುದಾಗಿತ್ತು. ಬೇರೆ ಬೇರೆ ಪ್ರದೇಶಗಳಿಗೆ ವಲಸೆಹೋಗಿರುವ ಈ ಜನರು ಮೂಲತಃ ಒಂದೇ ಜಾತಿಗೆ ಸೇರಿದವರಾಗಿದ್ದು, ತಾವು ವಾಸಿಸುವ ನೆಲೆಯಲ್ಲಿಯ ಸ್ಥಳೀಯ ಭಾಷೆಯನ್ನು ತಮ್ಮ ಮಾತೃ ಭಾಷೆಯನ್ನಾಗಿಸಿಕೊಂಡಿದ್ದಾರೆ.

**ಉಪ್ಪಾರ ಶಬ್ದದ ಪ್ರಾಚೀನತೆ ಮತ್ತು ಅರ್ಥ**

ಉಪ್ಪಾರ ಶಬ್ದದ ಪ್ರಾಚೀನತೆಯನ್ನು ನೋಡುವುದಾದರೆ ಜಾತಿಯನ್ನು ಸೂಚಿಸುವ 'ಉಪ್ಪಾರ' ಪದ ಹಿಂದೆ ವೃತ್ತಿ ಸೂಚಕವಾಗಿತ್ತು. ಯಾವುದಾದರೂ ಇತಿಹಾಸವನ್ನು ತಿಳಿಯಬೇಕಾದರೆ, ಅವುಗಳಲ್ಲಿ ಪ್ರಮುಖ ಪಾತ್ರವಹಿಸುವಂತಹುಗಳು ಶಾಸನಗಳು. ಪ್ರಾಚೀನ ಶಾಸನಗಳಲಿ 'ಉಪ್ಪಾರಗೌಡ' 'ಉಪ್ಪಲಿಗಶೆಟ್ಟ' ಎನ್ನುವ ಉಲ್ಲೇಖಗಳಿವೆ. ಇವುಗಳನ್ನು ಗಮನಿಸಿದರೆ, ರಾಜ ಮಹಾರಾಜರುಗಳ ಕಾಲದಲ್ಲಿ ಉಪ್ಪಾರರಿಗೆ ಒಳ್ಳೆಯ ಸ್ಥಾನಮಾನಗಳು ಇದ್ದವು ಎಂದು ತಿಳಿದುಬರುತ್ತದೆ. 'ಗೌಡ' ಮತ್ತು 'ಶೆಟ್ಟ'ಎನ್ನುವ ಪದಗಳಿಗೆ ಕ್ರಮವಾಗಿ

[1] *ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸಗಿ, ಯಾದಗಿರಿ ಜಿಲ್ಲೆ.*

ಒಂದು ಪ್ರದೇಶದ ಮುಖಂಡ (ನಾಯಕ) ಮತ್ತು ವ್ಯಾಪಾರಿಗಳನ್ನು ತಿಳಿಸುವ ಶಬ್ದಗಳಾಗಿವೆ. ಇದರ ಪ್ರಕಾರ ಉಪ್ಪಾರರು ಹಿಂದೆ ಒಂದು ಪ್ರದೇಶದ ಮುಖಂಡರಾಗಿಯೂ, ವ್ಯಾಪಾರಿಗಳಾಗಿಯೂ ಉನ್ನತ ಸ್ಥಾನದಲ್ಲಿದ್ದರೆಂದು ಖಚಿತವಾಗಿ ಹೇಳಬಹುದು.

'ಉಪ್ಪಲಿಗ ಗೌಡ', 'ಶೆಟ್ಟಿ' ಎಂಬ ಉಲ್ಲೇಖಗಳು ಹೊನ್ನೂರು ಕೆಂಕರೆ ಕಟ್ಟೆಯಲ್ಲಿ ಹೂತು ಹೋಗಿದ್ದ ಕಲ್ಲಿನಲಿ ಮತ್ತು ಹರದರಹಳ್ಳಿಯ ತಾಮ್ರ ಶಾಸನದಲ್ಲಿಯೂ ಕಾಣಬಹುದಾಗಿದೆ. ಈ ಶಾಸನಗಳು ಹೊಯ್ಸಳರ ಕಾಲದವು. ಉಪ್ಪನ್ನು ತಯಾರಿಸುವ ಪವಿತ್ರ ವೃತ್ತಿಯನ್ನು ಮಾಡಿ ಮನು ಕುಲದ ಮೂಲ ಅವಶ್ಯಕತೆಯನ್ನು ಪೂರೈಸುತ್ತಾ ಬಂದ ಸಮುದಾಯದವರಿಗೆ ಉಪ್ಪಾರ ಎಂದು ಕರೆಯಲಾಗಿದೆ ಎನ್ನುವುದು ಶಾಸನಗಳು ಖಚಿತಪಡಿಸುತ್ತವೆ.

'ಉಪ್ಪಾರ' ಎಂಬುವುದಕ್ಕೆ ಕಸ್ತೂರಿ ಕೋಶದಲ್ಲಿ' ಗೋಡೆ ಕಟ್ಟುವವನು', 'ಗಾರೆ' ಎಂಬುದಾಗಿಯೂ 'ಉಪ್ಪಲಿಗ' ಎಂಬುದಕ್ಕೆ 'ಉಪ್ಪಾರ', ಮೀನುಗಾರ, ಉಪ್ಪು ತಯಾರಿಸುವವನು ಎನ್ನುವ ಅರ್ಥವಿದೆ. ಗುರುನಾಥ ಜೋಷಿಯವರ ಶಬ್ದ ಕೋಶದಲ್ಲಿ ಉಪ್ಪಾರ ಎಂದರೆ 'ಮನೆಕಟ್ಟುವವ', 'ಗೋಡೆಕಟ್ಟುವವ', ಎಂಬ ಅರ್ಥವನ್ನು ಕೊಡಲಾಗಿದೆ.

**'ಉಪ್ಪಾರ' ಪದದ ನಿಷ್ಪತ್ತಿ**

- ಉಪವೀರರೆ ಈ ಉಪ್ಪಾರರು. ಉಪವೀರ ಶಬ್ದವು ಅಪಭ್ರಂಶ ಹೊಂದಿ ಉಪ್ಪಾರ ಆಗಿದೆ ಎಂದು ಹೊಸದುರ್ಗ ತಾಲೂಕಿನ ಶ್ರೀರಾಮಚಂದ್ರಪ್ಪನವರು ಅಭಿಪ್ರಾಯಪಟ್ಟಿದ್ದಾರೆ.
- ಉಪ್ಪು+ಅರ್=ಉಪ್ಪಾರ' ಆಗಿದೆ. 'ಅರ್' ಜಲವಾಚಕ ಶಬ್ದವಾಗಿದೆ. ಒಕ್ಕಲು ಮಾಡುವವನು ಒಕ್ಕಲಿಗನಾದಂತೆ ಉಪ್ಪನ್ನು ತಯಾರಿಸುವವನು ಉಪ್ಪಾರನಾದನು.
- ಮಣ್ಣಿನಿಂದ ಉಪ್ಪನ್ನು ತಯಾರಿಸುವ ವೃತ್ತಿಯವರಿಗೆ ಉಪ್ಪಾರ ಎಂಬ ಹೆಸರು ಬಳಕೆಗೆ ಬಂದಿದೆ ಎಂದು ಹೇಳಲಾಗುತ್ತದೆ. ಅವರು ನಿರ್ವಹಿಸುವ ಕೆಲಸಗಳ ಆಧಾರದ ಮೇಲೆ ಮಣ್ಣು ಉಪ್ಪಾರರು, ಕಲ್ಲು ಉಪ್ಪಾರರು, ಜನಿವಾರ ಉಪ್ಪಾರರು ಮುಂತಾಗಿ ಕರೆಯುವ ರೂಢಿಯಿದೆ. ಉಪ್ಪಾರ ಸಮುದಾಯದವರು ಹಿಂದಿನ ರಾಜ ಮಹಾರಾಜರುಗಳ ಕಾಲದಲ್ಲಿ ಕೋಟೆ ಕೊತ್ತಲಗಳನ್ನು, ಅನೇಕ ದೇವಸ್ಥಾನಗಳನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುವುದು ದಾಖಲೆಗಳಿಂದ ತಿಳಿದುಬರುತ್ತದೆ.

**ಉಪ್ಪಾರರ ಕುಟುಂಬ ಪದ್ಧತಿ**

ಇವರಲ್ಲಿ ವಿಭಕ್ತ ಕುಟುಂಬ ಮತ್ತು ಅವಿಭಕ್ತ ಕುಟುಂಬ ಎಂಬ ಎರಡು ಪ್ರಭೇದಗಳಿದ್ದರೂ ಆಧುನಿಕತೆ ಬೆಳೆದಂತೆ ವಿಭಕ್ತ ಕುಟುಂಬಗಳ ಸಂಖ್ಯೆಯೇ ಹೆಚ್ಚಾಗಿ ಕಂಡುಬರುತ್ತದೆ. ಒಂದು ಕುಟುಂಬದಲ್ಲಿ ಹಿರಿಯವನಾದ ಅಣ್ಣನೇ ಮನೆಯ ಯಜಮಾನನಾಗುತ್ತಾನೆ. ಮನೆಯಲ್ಲಿ ನಡೆಯುವ ಮದುವೆ, ಹಬ್ಬ ಇತ್ಯಾದಿ ಆಚರಣೆಗಳು ಈತನ ಒಪ್ಪಿಗೆಯ ಮೇರೆಗೆ ನಡೆಯುತ್ತವೆ. ಮನೆಯಲ್ಲಿ ನಡೆಯುವ ಸಣ್ಣ–ಪುಟ್ಟ ಜಗಳಗಳು ಈತನ ಮೂಲಕವೇ ಪರಿಹಾರಗೊಳ್ಳುತ್ತವೆ. ವಿಭಕ್ತ ಕುಟುಂಬ ಅಂದರೆ, ಚಿಕ್ಕ ಕುಟುಂಬ, ಪತಿ–

ಪತ್ನಿ, ಮಕ್ಕಳು ಸೇರಿಕೊಳ್ಳುತ್ತಾರೆ. ವಿಭಕ್ತ ಕುಟುಂಬದಲ್ಲಿ ತಂದೆಯೇ ಪ್ರಧಾನ ವ್ಯಕ್ತಿಯಾಗಿರುತ್ತಾನೆ. ವಯಸ್ಸಾದವರಿಗೆ ಮನೆಯ ಅಧಿಕಾರವಿರುವುದಿಲ್ಲ. ಮಕ್ಕಳಿಗೆ ತಂದೆಯೇ ಮುಂದೆ ನಿಂತು ಮದುವೆ ಮಾಡುವ ಪ್ರಮುಖ ಜವಾಬ್ದಾರಿಯನ್ನು ಹೊಂದಿರುತ್ತಾನೆ. ಗಂಡು ಮಕ್ಕಳಿಗೆ ಮದುವೆಯೇ ಪ್ರಧಾನ ಘಟ್ಟ. ಮದುವೆಯನ್ನು ನೆರವೇರಿಸಿದ ನಂತರ ತಂದೆಯೇ ಮಕ್ಕಳಿಗೆ ಸಲ್ಲುವ ಆಸ್ತಿಯನ್ನು ಕೊಟ್ಟು, ತಾವು ಬೇರೆಯಾಗಿಯೇ ಉಳಿದುಕೊಳ್ಳುತ್ತಾರೆ.

ಉಪ್ಪಾರರಲ್ಲಿ ತಂದೆಯ ಕಡೆಯ ರಕ್ತ ಸಂಬಂಧಿಗಳಿಗೆ ವಿಶೇಷ ಮಹತ್ವ ಸಿಗುತ್ತದೆ. ತಂದೆಯ ತಂದೆ–ತಾಯಿ ಅಜ್ಜ–ಅಜ್ಜಿಯರೆಂದು ಕರೆಯಿಸಿಕೊಳ್ಳುತ್ತಾರೆ. ಮೊಮ್ಮಕ್ಕಳಿಗೆ ಅಜ್ಜ–ಅಜ್ಜಿಯರೆಂದರೆ ಬಹಳಪ್ರೀತಿ. ಅದೇ ರೀತಿ ಅಜ್ಜ–ಅಜ್ಜಿಯರಿಗೆ ಮೊಮ್ಮಕ್ಕಳೆಂದರೆ ತುಂಬಾ ಮಮಕಾರ, ವಾತ್ಸಲ್ಯ ಮತ್ತು ಪ್ರೀತಿಯನ್ನು ಹೊಂದಿರುತ್ತಾರೆ.

ತಮ್ಮ ತಮ್ಮ ಜಾತಿಯಲ್ಲಿ ಜಗಳಗಳಾದರೆ ತಮ್ಮ ಜಾತಿಯ ಮುಖಂಡರಿಂದ ಪರಿಹಾರ ಕಂಡುಕೊಳ್ಳುತ್ತಾರೆ. ಬೇರೆ ಬೇರೆ ಜಾತಿಯವರೊಂದಿಗೆ ಜಗಳಗಳಾದರೆ ಊರಿನ ಮುಖಂಡರಿಂದ ಪರಿಹರಿಸಿಕೊಳ್ಳುವ ಪದ್ಧತಿಯಿದೆ.

**ಉಪ್ಪಾರರು ಧರ್ಮ ಸಹಿಷ್ಣುಗಳು**

ನಾಗರಿಕತೆಯ ಬೆಳವಣಿಗೆಯ ಕಾಲಾನಂತರ ಸಮಾಜ ಎನ್ನುವುದು ಪರಿಸರ, ತಮ್ಮ ಪ್ರಾದೇಶಿಕತೆ, ಬಣ್ಣ, ಉಚ್ಚ–ನೀಚ ಇತ್ಯಾದಿಗಳ ನೆಲೆಯಲ್ಲಿ ಒಡೆದು ಸಂಕುಚಿತಾರ್ಥದ ಅನೇಕ ಸಮಾಜಗಳಾಗಿ ಮಾರ್ಪಟ್ಟವು. ಕ್ರಮೇಣ ಬೇರೆಬೇರೆ ಕಾರಣಗಳಿಂದಾಗಿ ಇದೇ ಸಮಾಜಗಳು ಜಾತಿ–ಉಪಜಾತಿಗಳಾಗಿ ಬೆಳೆದು ಬಂದವು.

ಹಿಂದೂ ಧರ್ಮದ ಆವರಣದಲ್ಲಿಯೇ ಬೆಳೆದು ಬಂದಿರುವ ಉಪ್ಪಾರರ ಸಾಮಾಜಿಕ ಜೀವನವು ಹಿಂದೂ ಸಾಮಾಜಿಕ ವ್ಯವಸ್ಥೆಗೆ ಅನುಗುಣವಾಗಿಯೇ ಇದೆ. ಕರ್ನಾಟಕದಲ್ಲಿರುವ ಉಪ್ಪಾರರಲ್ಲಿ ಮುಖ್ಯವಾಗಿ ಎರಡು ರೀತಿಯ ಸಂಪ್ರದಾಯಗಳನ್ನು ಕಾಣಬಹುದು. ಒಂದು ಶೈವ ಸಂಪ್ರದಾಯ (ಜನಿವಾರ ಉಪ್ಪಾರರು), ಇನ್ನೊಂದು ವೈಷ್ಣವ ಸಂಪ್ರದಾಯ (ನಾಮಧಾರಿ ಉಪ್ಪಾರರು).

ಉತ್ತರ ಕರ್ನಾಟಕ ಭಾಗದ ಉಪ್ಪಾರರಲ್ಲಿ ಹೆಚ್ಚಾಗಿ ಶೈವ ಸಂಪ್ರದಾಯವನ್ನು, ದಕ್ಷಿಣ ಕರ್ನಾಟಕದ ಉಪ್ಪಾರರಲ್ಲಿ ವೈಷ್ಣವ ಸಂಪ್ರದಾಯವನ್ನು ಕಾಣಬಹುದು. ಇದಕ್ಕೆ ಮುಖ್ಯ ಕಾರಣ ಆ ಭಾಗದ ಪ್ರಭಾವಶಾಲಿ ಧಾರ್ಮಿಕ ವ್ಯಕ್ತಿಗಳಾದ ಬಸವಣ್ಣ ಮತ್ತು ರಾಮಾನುಜಾಚಾರ್ಯರ ಪ್ರಭಾವಗಳು ಉಪ್ಪಾರರ ಮೇಲೆ ಆಗಿರುವುದನ್ನು ಕಾಣುತ್ತೇವೆ. ಆದರೂ ಉಪ್ಪಾರರು ಹೆಚ್ಚಿನ ಪ್ರಮಾಣದಲ್ಲಿ ವೈಷ್ಣವ ಸಂಪ್ರದಾಯಕ್ಕೆ ಸೇರಿದವರಾಗಿದ್ದಾರೆ.

ಅಲ್ಲದೆ ತಮ್ಮ ಮೂಲಕ ಸುಬಾದ ಉಪ್ಪು ತಯಾರಿಸುವ ಕೆಲಸ ನಿರ್ವಿಘ್ನವಾಗಿ ನಡೆಯಲೆಂದು ಉಪ್ಪಿನ ಮಾಳಗಳಲ್ಲಿ ಗಣಪತಿಯನ್ನು ಪೂಜಿಸಿ ನೈವೇದ್ಯವನ್ನು ಅರ್ಪಿಸಲಾಗುತ್ತಿತ್ತು. ಶೈವ ಮತ್ತು ವೈಷ್ಣವ ಮತಾವಲಂಭಿಗಳಾಗಿದ್ದ ಉಪ್ಪಾರರು ಸ್ಥಳೀಯವಾದ ಎಲ್ಲಾದೇವರುಗಳನ್ನು ಆರಾಧಿಸುವ ಮೂಲಕ ಸರ್ವದೇವೋಪಾಸಕರಾಗಿದ್ದರು.

**ಉಪ್ಪಾರರ ಸಾಮಾಜಿಕ ಸ್ಥಾನಮಾನಗಳು**

ಕರ್ನಾಟಕ ರಾಜ್ಯದಲ್ಲಿ ಉಪ್ಪಾರರ ಸಂಖ್ಯೆಸುಮಾರು 30 ರಿಂದ 40 ಲಕ್ಷದಷ್ಟಿದ್ದು, ಈ ಸಮುದಾಯದವರಿಗೆ ಸೂಕ್ತ ಸ್ಥಾನಮಾನಗಳು ಸಿಕ್ಕಿಲ್ಲವೆಂದೇ ಹೇಳಬಹುದಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಏಳುದಶಕಗಳು ಕಳೆದರೂ ಉಪ್ಪಾರ ಸಮುದಾಯವು ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ತೀರಾ ಹಿಂದುಳಿದಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಉಪ್ಪಾರ ಸಮುದಾಯದ ಸ್ಥಿತಿ ಶೋಚನೀಯವಾಗಿದೆ. ಬಡತನ, ನಿರುದ್ಯೋಗ, ಅನಕ್ಷರತೆ ಪ್ರಮಾಣ ಹೆಚ್ಚಾಗಿದ್ದು ಸರಕಾರದಿಂದ ಬರುವ ಸವಲತ್ತುಪಡೆಯದ ಅವರ ಸ್ಥಿತಿ ಚಿಂತಾಜನಕವಾಗಿದೆ. ಪ್ರಸ್ತುತ ಪ್ರವರ್ಗ–1ರಲ್ಲಿ ಮೀಸಲಾತಿ ಪಡೆಯುತ್ತಿರುವ ಉಪ್ಪಾರ ಸಮುದಾಯವನ್ನು ಪರಿಶಿಷ್ಟಪಂಗಡಕ್ಕೆ ಸೇರಿಸಬೇಕೆಂಬುದು ಬಹುದಿನಗಳ ಬೇಡಿಕೆಯಾಗಿದೆ.

ಸರಕಾರ ಈ ನಿಟ್ಟಿನಲ್ಲಿ ಪ್ರಯತ್ನಿಸಿ ಉಪ್ಪಾರ ಜನಾಂಗವನ್ನು ಪ್ರವರ್ಗ–1 ರಿಂದಬೇರ್ಪಡಿಸಿ, ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿಸಿದರೆ ಸರಕಾರದ ಸವಲತ್ತುಗಳು ಸ್ವಲ್ಪಮಟ್ಟಿಗಾದರೂ ಸಿಗಬಹುದು ಎಂದು ಈ ಸಮುದಾಯದ ಜನರು ಆಶಾಭಾವನೆಯನ್ನು ಹೊಂದಿದ್ದಾರೆ.

**ಉಪ್ಪಾರರಲ್ಲಿ ಕಂಡುಬರುವ ವಿಶಿಷ್ಟನ್ಯಾಯ ಪದ್ದತಿ**

ಉಪ್ಪಾರ ಸಮುದಾಯದವರಲ್ಲಿ ನಾವು ವಿಶಿಷ್ಟವಾದ ನ್ಯಾಯ ಪದ್ದತಿಯನ್ನು ಕಾಣುತ್ತೇವೆ. ಇವರ ನ್ಯಾಯಪದ್ದತಿಯು ಸುಪ್ರಸಿದ್ಧ ನ್ಯಾಯ ನಿಷ್ಣಾತನಾಗಿದ್ದ ಹಮ್ಮುರಾಭಿಯನ್ನು ನೆನಪಿಸುತ್ತದೆ. ಅಂದರೆ, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿರುವ ಉಪ್ಪಾರ ಜನಾಂಗದ ಗ್ರಾಮಗಳಲ್ಲಿ ಒಬ್ಬ ಯಜಮಾನ ಇರುತ್ತಾನೆ. ಐದು ಗ್ರಾಮಗಳು ಸೇರಿ ಒಂದು ಒಕ್ಕೂಟ ರಚಿಸಿಕೊಳ್ಳುತ್ತಾರೆ. ಐದು ಗ್ರಾಮಗಳ ಯಜಮಾನನ ಮನೆಯಕಟ್ಟೆ ನ್ಯಾಯ ಕಟ್ಟೆಯಾಗಿರುತ್ತದೆ. ಅಲ್ಲಿ ವಿವಾದಗಳನ್ನು ಬಗೆಹರಿಸಿಕೊಳ್ಳುತ್ತಾರೆ.

**ಉಪ್ಪಾರರ ಸಾಕ್ಷರತಾ ಪ್ರಮಾಣ**

ಉಪ್ಪಾರ ಸಮುದಾಯವು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿದೆ. ಈ ಸಮುದಾಯದಲ್ಲಿ ಇರುವ ಪುರುಷರು ಶೇಕಡಾ 15 ರಿಂದ 20ರಷ್ಟು ಸಾಕ್ಷರರಾಗಿದ್ದಾರೆ. ಈ ಸಮುದಾಯದ ಮಹಿಳೆಯರು ಕೇವಲ ಶೇಕಡಾ 10ಕ್ಕಿಂತ ಕಡಿಮೆ ಸಾಕ್ಷರತೆಯನ್ನು ಹೊಂದಿದ್ದಾರೆ. ಒಟ್ಟಾರೆಯಾಗಿ ಈ ಸಮುದಾಯದ ಸಾಕ್ಷರತೆಯನ್ನು ನೋಡಿದರೆ ಅದು ಶೇಕಡಾ. 15ರಷ್ಟನ್ನು ಮೀರುವುದಿಲ್ಲ.

**ಉಪಸಂಹಾರ**

ಈ ರೀತಿಯಾಗಿ ಹಿಂದುಳಿದ ವರ್ಗಗಳಲ್ಲಿ ಬರುವ ಉಪ್ಪಾರ ಸಮುದಾಯದ ಕುರಿತು ಅಧ್ಯಯನದಲ್ಲಿ ಉಪ್ಪಾರ ಜನಾಂಗದ ಪ್ರಾಚೀನತೆ, ಉಪ್ಪಾರರ ಮೂಲ ವೃತ್ತಿ ಮುಂತಾದವುಗಳನ್ನು ನಾವು ಅವಲೋಕಿಸಿದಾಗ ಈ ಸಮುದಾಯವು ಅಭಿವೃದ್ಧಿಯ ಪಥದಲ್ಲಿ ಇನ್ನೂ ಸಾಕಷ್ಟು ಹಿಂದುಳಿದಿರುವುದು ಕಂಡುಬರುತ್ತದೆ. ಇನ್ನೂ ಸಾಮಾಜಿಕವಾಗಿ ತೀರಾ ಹಿಂದುಳಿದಿದ್ದರೂ ಉಪ್ಪಾರರನ್ನು ಪ್ರವರ್ಗ–1ರಲ್ಲಿಯೇ ಸೇರ್ಪಡೆ ಮಾಡಲಾಗಿದೆ. ಈ ವರ್ಗದಲ್ಲಿ ಇರುವ ಸುಮಾರು 115ಕ್ಕೂ ಹೆಚ್ಚು ಜಾತಿಗಳು ಕೇವಲ 4% ಮೀಸಲಾತಿಗಾಗಿ ಪರಸ್ಪರ ಸಂಘರ್ಷ ನಡೆಸಬೇಕಾದ ಪರಿಸ್ಥಿತಿ ಈ ಸಮುದಾಯದ್ದಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಆಧುನಿಕತೆ ಬೆಳೆದಂತೆ ಈ ಸಮುದಾಯವು ಸುಧಾರಣೆ ಯಾಗುತ್ತಿರುವಂತೆ ಕಂಡುಬರುತ್ತಿದೆ. ಇತ್ತೀಚೆಗೆ ಶೈಕ್ಷಣಿಕವಾಗಿ ಸ್ವಲ್ಪ ಮುಂದೆ ಬರುತ್ತಿರುವ ಸಮುದಾಯದ ಪ್ರತಿಭಾವಂತ ಬೆರಳೆಣಿಕೆಯಷ್ಟು ಅಭ್ಯರ್ಥಿಗಳು ವೈದ್ಯರು, ಇಂಜಿನೀಯರ ನಂತಹ ಉತ್ತಮ ಉದ್ಯೋಗ ಪಡೆಯುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

**ಪರಾಮರ್ಶನ ಗ್ರಂಥಗಳು**


- ಸರಸ್ವತಿ ಚಿಮ್ಮಲಗಿ. (2012). ಉಪ್ಪಿನ ರುಚಿ. ಕರ್ನಾಟಕ ರಾಜ್ಯ ಉಪ್ಪಾರ ಸಂಘ, ಬೆಂಗಳೂರು.
- ಶ್ರೀಚಂದಪ್ಪ ಮಲ್ಲಪ್ಪ ಮೇಟಿ. (2013). ನನ್ನ ಮೂಲ ಗುರುತು. ನೀಲಾ ಪ್ರಕಾಶನ, ರಾಯಚೂರು.
- ಶೋಭಾದೇವಿ ಚೆಕ್ಕಿ. (2013). ಸಮಾಜಶಾಸ್ತ್ರದ ಮೂಲ ತತ್ವಗಳು. ಎಸ್.ಎಸ್. ಭಾವಿಕಟ್ಟಿ ಪ್ರಕಾಶನ, ಕಲಬುರಗಿ.


IIMRD JOURNALS